ಪಾಕಿಸ್ತಾನಿಯೋ ಇರಬೇಕು ಎಂದುಕೊಂಡು, 'ಸಾರಿ, ನಾನು ನೋಡ್ಲಿಲ್ಲ' ಎಂದ ಹಿಂದಿಯಲ್ಲಿ. 'ಪರ್ವಾಗಿಲ್ಲ ಸಾರ್, ನಿಮ್ಮದೇನೂ ತಪ್ಪಿಲ್ಲ' ಎಂದು ಆ ವ್ಯಕ್ತಿ ಕನ್ನಡದಲ್ಲಿ ಉತ್ತರಿಸಿದ. 'ಏನಯ್ಯಾ ಕನ್ನಡದವನಾ ನೀನು? ಯಾವ ಊರು? ಏನಯ್ಯಾ ಮಾಡ್ತಾ ಇದೀಯಾ ಕಸದ ತೊಟ್ಟಿಯಲ್ಲಿ?' ಎಂದ ಕುಮಾರ್‌ಗೆ, 'ಸರ್ ಇದು ನಿಮಗೆ ಕಸದ ತೊಟ್ಟಿ, ನಮಗೆ ಅಕ್ಷಯಪಾತ್ರೆ, ಇದರಲ್ಲಿ ಸಿಗುವ ದೊಡ್ಡ ದೊಡ್ಡ ರಟ್ಟಿನ ಡಬ್ಬಗಳೂ, ನ್ಯೂಸ್‌ಪೇಪರ್, ಪ್ಲಾಸ್ಟಿಕ್ ಇತ್ಯಾದಿಯನ್ನು ಮಾರಿದ್ರೆ ಮಾತ್ರ ನನ್ನ ಜೀವನ ಸಾಗುತ್ತೆ ಸರ್. ನಿಮ್ಮನ್ನು ಇಲ್ಲಿ ಬಹಳಷ್ಟು ಬಾರಿ ನೋಡಿದ್ದೇನೆ, ನೀವು ಕನ್ನಡದವರು ಎಂದು ನಂಗೆ ಗೊತ್ತು. ನೀವು ಪ್ರಸಿದ್ಧ ಕಥೆಗಾರರಾದ ಜಿಗಣಿ ಕುಮಾರ್ ಅಲ್ಲವೇ? ನಿಮ್ಮ ಕಥೆಗಳನ್ನು ನಾನು ಮೊದಲಿನಿಂದಲೂ ಓದುತ್ತಿದ್ದೇನೆ. ನೀವು ಇತ್ತೀಚಿಗೆ ಇಲ್ಲಿಗೆ ಬಂದು ನೆಲೆಸಿದ್ದೀರೆಂದು ಗೊತ್ತಾಯಿತು. ನನಗಿಂತಲೂ ನನ್ನ ಹೆಂಡತಿ ನಿಮ್ಮ ದೊಡ್ಡ ಫ್ಯಾನ್. ಅವಳು ನಿಮ್ಮ ಎಲ್ಲಾ ಕಥೆಗಳನ್ನೂ ಓದಿದ್ದಾಳೆ. ನಾನು ನಿಮ್ಮನ್ನು ಮಾತನಾಡಿಸಬೇಕೆಂದು ಬಹಳ ಸಲ ಅಂದುಕೊಂಡಿದ್ದೆ, ಆದರೆ ನಿಮ್ಮನ್ನು ಮಾತನಾಡಿಸಲು ಧೈರ್ಯ ಸಾಲಲಿಲ್ಲ' ಎಂದನು. ಜಿಗಣಿ ಕುಮಾರ್‌ಗಂತೂ ವಿದೇಶದಲ್ಲೂ ತನ್ನ ಕಥೆ ಓದುವ ಅಭಿಮಾನಿಗಳಿದ್ದಾರೆಂದು ಆನಂದದಿಂದ ಗಾಳಿಯಲ್ಲಿ ತೇಲುವಂತಾಯಿತು. ಆನಂದದಿಂದ ನಾರಾಯಣನನ್ನು ಅಲ್ಲಿಯೇ ಆಲಂಗಿಸಿಕೊಳ್ಳಬೇಕೆನಿಸಿದರೂ ಕಸದ ತೊಟ್ಟಿಯಲ್ಲಿ ಮುಳುಗೆದ್ದಿದ್ದ ಅವನನ್ನು ತಬ್ಬಿಕೊಳ್ಳುವ ಆಸೆಯನ್ನು ಹತ್ತಿಕ್ಕಿ 'ನಿಮ್ಮಿಬ್ಬರ ಸಾಹಿತ್ಯಾಸಕ್ತಿಗೆ ನಾನು ಶರಣು' ಎಂದು ವಂದಿಸಿ 'ಏನಯ್ಯ ನಿನ್ನ ಹೆಸರು?' ಎಂದಿದ್ದಕ್ಕೆ 'ನಾರಾಯಣ' ಎಂದ ಆತ. 'ಒಮ್ಮೆ ಮನೆ ಕಡೆಗೆ ಬಾರಯ್ಯ' ಎಂದು ಹೇಳಿ ತನ್ನ ಮನೆಯನ್ನು ಅಲ್ಲಿಂದಲೇ ಅವನಿಗೆ ತೋರಿಸಿ ಹೊರಟ. ಅಲ್ಲಿಗೆ ಅವರಿಬ್ಬರ ಭೇಟಿ ಮುಗಿಯಿತು.

ಮನೆಗೆ ಬಂದ ಕುಮಾರ ಮಲಗಲು ಹೋದಾಗ ಕಸದ ತೊಟ್ಟಿಯಿಂದ ಹಲ್ಲು ಕಿರಿಯುತ್ತಾ ಎದ್ದು ನಿಂತಿದ್ದ ನಾರಾಯಣನ ಮುಖವೇ ಕಣ್ಣೆದುರು ಮತ್ತೆ ಮತ್ತೆ ಬರತೊಡಗಿತು. ತಕ್ಷಣ ಮನದ ಒಂದು ಮೂಲೆಯಲ್ಲಿ ಕಥೆಯ ಯಾವುದೋ ಒಂದು ಎಳೆಯು ಸಿಕ್ಕಿತು. ಕಥೆಗಳ ಬರವನ್ನೇ ಎದುರಿಸುತ್ತಿದ್ದ ಕುಮಾರನೊಳಗಿದ್ದ ಕಥೆಗಾರನು, ನೀರಿನಲ್ಲಿ ಮುಳುಗುತ್ತಿದ್ದವನಿಗೆ ಸಿಕ್ಕ ಗರಿಕೆಯ ಕಡ್ಡಿಯಂತೆ ಸಿಕ್ಕ ಕಥೆಯ ಎಳೆಯನ್ನು ಹಿಡಿದುಕೊಂಡು ಮೇಲೆ ಬರತೊಡಗಿದ. ಮಲಗಲು ಹೋದ ಕುಮಾರನನ್ನು ಕಥೆಗಾರ ಮಲಗಲು ಬಿಡಲಿಲ್ಲ. ಒಳಗಿನಿಂದ ಏನೋ ಒತ್ತಡ, ಯಾವುದೋ ಅಸ್ಪಷ್ಟ ಕಲ್ಪನೆಗಳು ಯಾವ್ಯಾವುದೋ ಕಥೆಯ ಎಳೆಗಳು ನಾರಾಯಣನನ್ನು ಕೇಂದ್ರವಾಗಿರಿಸಿಕೊಂಡು ಅವನ ಸುತ್ತ ನೇಯತೊಡಗಿದವು. ಎಚ್ಚರ ಮತ್ತು ಮಂಪರಿನ ನಡುವೆ ಜೀಕುತ್ತಿದ್ದ ಕುಮಾರನಿಗೆ ಯಾವಾಗ ನಿದ್ರೆ ಬಂತೋ ತಿಳಿಯಲಿಲ್ಲ. ಮಾರನೆಯ ದಿನ ಆಫೀಸಿನ ಕೆಲಸದಲ್ಲಿ ಬಸವಳಿದು ಸಂಜೆ ಕುಮಾರ ಮನೆಗೆ ಬಂದಾಗ ಮನೆಯಲ್ಲಿ ಮಡದಿಯು ಮಕ್ಕಳ ಮೇಲೆ ಕಿರುಚಾಡುತ್ತಾ, ಏನನ್ನೋ ಹುಡುಕುತ್ತಾ, ಮನೆಯನ್ನೆಲ್ಲಾ ಜಾಲಾಡುತ್ತಿದ್ದಳು. 'ಏನಾಯ್ತು?' ಎಂದ ಕುಮಾರ್. 'ನಿನ್ನೆ ರಾತ್ರಿ ಅಡುಗೆ ಮನೆಯ ಕಟ್ಟೆಯ ಮೇಲಿಟ್ಟಿದ್ದ ನಮ್ಮಿಬ್ಬರ ಡಿಗ್ರಿ ಸರ್ಟಿಫಿಕೇಟ್ಸ್ ಇದ್ದ ಕವರ್ ಕಾಣಿಸ್ತಾ ಇಲ್ಲಾ' ಎಂದಳು. 'ಅಡುಗೆ ಮನೆಗೆ ಯಾಕೆ ತಂದಿದ್ದೆ ಡಿಗ್ರಿ ಸರ್ಟಿಫಿಕೇಟ್ಸ್? ಒಲೆ ಹಚ್ಕೋಕಾ?' ಎಂದ ಕುಮಾರ್ ಸಿಟ್ಟಿನಿಂದ.

'ಒಳಗಿನ ರೂಮಿನಲ್ಲಿ ನಮ್ಮಿಬ್ಬರ ಸರ್ಟಿಫಿಕೇಟುಗಳನ್ನು ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡ್ತಾ ಇದ್ದೆ. ಅಷ್ಟರಲ್ಲಿ ಅನ್ನಕ್ಕೆ ಇಟ್ಟಿದ್ದ ಕುಕ್ಕರ್ ಸೀಟಿ ಹೊಡೀತು, ಅದಕ್ಕೆ ಎಲ್ಲವನ್ನೂ ಎತ್ಕೊಂಡೇ ಅಡುಗೆ ಮನೆಗೆ ಬಂದು, ಇಲ್ಲೇ ಈ ಸ್ಟ್ಯಾಂಡಿನ ಮೇಲೆ ಇಟ್ಟಿದ್ದೆ. ಅಡುಗೆ ಕೆಲಸ ಮುಗಿಯೋದರಲ್ಲಿ ಯಾವುದೋ ಫೋನ್ ಬಂದು, ಆ ಸರ್ಟಿಫಿಕೇಟ್ಸ್ ಕವರ್ ಇಟ್ಟಿರೋದೇ ಮರೆತುಹೋದೆ. ಇವತ್ತು ಅದನ್ನು ನೆನೆಸಿಕೊಂಡು ಎಲ್ಲಿ ಹುಡುಕಿದ್ರೂ ಸಿಗ್ತಿಲ್ಲ. ನೀವೇನಾದ್ರು ನೋಡಿದ್ರಾ?' ಎಂದಳು.

'ಇಲ್ಲಾ ನಾನು ನೋಡ್ಲಿಲ್ಲ. ಈಗ ಕಳೆದುಹೋಗಿರೋ ಸರ್ಟಿಫಿಕೇಟುಗಳನ್ನು ಮತ್ತೆ ಡೂಪ್ಲಿಕೇಟ್ ಮಾಡಿಸಲು ಊರಿಗೆ ಹೋಗಿ, ಮರೆತೇ ಹೋದಂತಿದ್ದ ಯೂನಿವರ್ಸಿಟಿಯಲ್ಲಿ ಯಾರ ಯಾರ ಕಾಲು ಹಿಡಿಯಬೇಕೋ?' ಎಂದು ಅವಲತ್ತುಕೊಂಡ.

'ನಿನ್ನೆಯಿಂದ ಮನೆಗೆ ಯಾರೂ ಬಂದಿಲ್ಲ. ಇನ್ಯಾರು ತಗೋತಾರೆ? ಅಡುಗೆ ಮನೆಯ ಈ ಸ್ಟ್ಯಾಂಡಿನ ಮೇಲೆ ಬಿಳಿಯ ಪ್ಲಾಸ್ಟಿಕ್ ಕವರಿನಲ್ಲಿಟ್ಟಿದ್ದೆ.